# WEBSITE PUBLICITY

## ವಿಶೇಷ ಮಧ್ಯಸ್ಥಿಕೆ ಅಭಿಯಾನ 3.0.

**ದಿನಾಂಕ: 01.08.2026 ರಿಂದ 02.01.2027 ರವರೆಗೆ**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ ವತಿಯಿಂದ **"ವಿಶೇಷ ಮಧ್ಯಸ್ಥಿಕೆ ಅಭಿಯಾನ** ಅನ್ನು ದಿನಾಂಕ **01.08.2026 ರಿಂದ 02.01.2027 ರವರೆಗೆ ರವರೆಗೆ** ಹಮ್ಮಿಕೊಳ್ಳಲಾಗಿದೆ.

ಈ ವಿಶೇಷ ಅಭಿಯಾನದಡಿ ನ್ಯಾಯಾಲಯಗಳಲ್ಲಿ ಬಾಕಿ ಇರುವ **ವಿವಿಧ ವರ್ಗಗಳ ಪ್ರಕರಣಗಳನ್ನು** ಗುರುತಿಸಿ, ಮಧ್ಯಸ್ಥಿಕೆಯ ಮೂಲಕ ಸೌಹಾರ್ದಯುತವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುವುದು. ಈ ಅಭಿಯಾನದಲ್ಲಿ **ಸಿವಿಲ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳು (MVC), ಕೌಟುಂಬಿಕ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಆಸ್ತಿ ವಿವಾದಗಳು, ಹಣಕಾಸು ಮತ್ತು ವಾಣಿಜ್ಯ ವಿವಾದಗಳು, ಕಾರ್ಮಿಕ ವಿವಾದಗಳು, ವೈವಾಹಿಕ ವಿವಾದಗಳು, ಜೀವನಾಂಶ (Maintenance) ಪ್ರಕರಣಗಳು ಹಾಗೂ ಇತರೆ ರಾಜಿ ಮಾಡಿಕೊಳ್ಳಬಹುದಾದ ಪ್ರಕರಣಗಳನ್ನು** ಒಳಗೊಂಡಂತೆ ವಿವಿಧ ವರ್ಗಗಳ ಪ್ರಕರಣಗಳನ್ನು ಪರಿಗಣಿಸಲಾಗುವುದು.

ಮಧ್ಯಸ್ಥಿಕೆ ಮೂಲಕ ಪರಿಹರಿಸಬಹುದಾದ ಪ್ರಕರಣಗಳನ್ನು ಸಂಬಂಧಪಟ್ಟ ನ್ಯಾಯಾಲಯಗಳಿಂದ ಮಧ್ಯಸ್ಥಿಕೆ ಕೇಂದ್ರಗಳಿಗೆ ಉಲ್ಲೇಖಿಸಿ, ಪಕ್ಷಕಾರರ ಸಮ್ಮತಿಯೊಂದಿಗೆ ವಿವಾದಗಳನ್ನು **ಶೀಘ್ರವಾಗಿ, ಸೌಹಾರ್ದಯುತವಾಗಿ ಹಾಗೂ ಪರಸ್ಪರ ಒಪ್ಪಿಗೆಯ ಆಧಾರದ ಮೇಲೆ** ಇತ್ಯರ್ಥಪಡಿಸಲು ಅವಕಾಶ ಕಲ್ಪಿಸಲಾಗುತ್ತದೆ.

ಆದ್ದರಿಂದ, ಮಧ್ಯಸ್ಥಿಕೆಗೆ ಅರ್ಹವಾಗಿರುವ ಪ್ರಕರಣಗಳಲ್ಲಿನ ಎಲ್ಲಾ ಸಂಬಂಧಪಟ್ಟ ಪಕ್ಷಕಾರರು ಈ ವಿಶೇಷ ಅಭಿಯಾನದ ಸದುಪಯೋಗ ಪಡೆದುಕೊಂಡು, ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಸ್ವ ಇಚ್ಛೆಯಿಂದ ಭಾಗವಹಿಸಿ ತಮ್ಮ ವಿವಾದಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳುವಂತೆ ಕೋರಲಾಗಿದೆ.

**ಸಂಪರ್ಕಕ್ಕಾಗಿ:**

- **ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ**
  **ಎ.ಡಿ.ಆರ್. ಕಟ್ಟಡ, ನೂತನ ನ್ಯಾಯಾಲಯ ಸಂಕೀರ್ಣ, ಗದಗ**
  **Contact No.: 08372-232534**
  **ಟೋಲ್ಫ್ರೀ-ಕಾನೂನು ಸೇವಾ ಸಹಾಯವಾಣಿ- 15100.**

- **ತಾಲೂಕು ಕಾನೂನು ಸೇವಾ ಸಮಿತಿ, ರೋಣ**
- **ತಾಲೂಕು ಕಾನೂನು ಸೇವಾ ಸಮಿತಿ, ನರಗುಂದ**
- **ತಾಲೂಕು ಕಾನೂನು ಸೇವಾ ಸಮಿತಿ, ಲಕ್ಷ್ಮೇಶ್ವರ**
- **ತಾಲೂಕು ಕಾನೂನು ಸೇವಾ ಸಮಿತಿ, ಮುಂಡರಗಿ**

**ಸದಸ್ಯ ಕಾರ್ಯದರ್ಶಿಗಳು**
**ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,**
**ಗದಗ**